## ಅಧಿಕ ಸಿವಿಲ್ ಜಡ್ಜ್  ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ

**ಓ ಎಸ್ ನಂ. 114/2015** **ಪಿ.ಡಬ್ಲು: 2**

**ದಿನಾಂಕ: 04.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ  ಶ್ರೀ. ಕೆ ಎಂ ಎಸ್  ವಕೀಲರಿಂದ:**

ನನ್ನ ತಂದೆಯವರು ಚಿಕ್ಕವಯಸ್ಸಿನಲ್ಲಿದ್ದಾಗ ಭದ್ರಾವತಿಯ ಅವರ ಅಕ್ಕ ಗಂಗಮ್ಮನ ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ.  ಅವರು 10 ನೇ ತರಗತಿ ಮುಗಿಸಿಕೊಂಡು ಕಾರ್ಖಾನೆಯಲ್ಲಿ ಕೆಲಸ ಮಾಡಲು ಭದ್ರಾವತಿಯ ಅವರ ಅಕ್ಕನಿಂಗಮ್ಮನ ಮನೆಯಲ್ಲಿ ವಾಸ ಇದ್ದರು. ನಮ್ಮ ತಂದೆಯವರು ಯಾವ ವಯಸ್ಸಿನಲ್ಲಿ ಕೆಲಸಕ್ಕೆ ಸೇರಿದರು ಎಂದು  ನನಗೆ ಗೊತ್ತಿಲ್ಲ.  ನನ್ನ ತಂದೆಯವರಿಗೆ 12 ವರ್ಷ ವಯಸ್ಸಿದ್ದಾಗ ಭದ್ರಾವತಿಯ ಅವರ ಅಕ್ಕನ ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ 1 ಯವರ ಜೊತೆಗೆ ಅವರ ತಂದೆ ತಾಯಿ ಅವರ ಊರಿನಲ್ಲಿ ವಾಸವಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ತಂದೆಯವರಿಗೆ ರಜೆ ದೊರೆತಾಗಲೆಲ್ಲಾ ಅವರು ಊರಿಗೆ ಬಂದು ಹೋಗುತ್ತಿದ್ದರು.  ನನ್ನ ತಂದೆ 10 ನೇ ತರಗತಿ ವರೆಗೆ ಓದಿರುತ್ತಾರೆ. ನನ್ನ ತಂದೆ ಕೆಲಸಕ್ಕೆ ಸೇರಿ ಸುಮಾರು 60 ವರ್ಷಗಳು ಆಗಿರುತ್ತದೆ.  ನನ್ನ ತಂದೆ ಕೆಲಸಕ್ಕೆ ಸೇರುವ  ಮೊದಲು ಅವರ ಖರ್ಚು ವೆಚ್ಚವನ್ನು ಅವರ ತಂದೆ ಮತ್ತು 1 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ನನ್ನ ತಾತ ಮಾತ್ರ ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ.  ನನ್ನ ತಾತ ಅವರು ತೀರಿಕೊಳ್ಳುವ ವರೆಗೂ 1 ನೇ ಪ್ರತಿವಾದಿಯ ಜೊತೆ ವಾಸವಿದ್ದರು ಎಂದರೆ ಸಾಕ್ಷಿ ಅವರು ನಮ್ಮ ಜೊತೆಯೂ ಕೆಲ ವರ್ಷಗಳ ಕಾಲ ಭದ್ರಾವತಿಯಲ್ಲಿ ವಾಸವಿದ್ದರು ಎನ್ನುತ್ತಾರೆ.

ದಾವಾ ಸ್ವತ್ತಿನ ಜಮೀನುಗಳಿಂದ ಬಂದ ಆದಾಯವನ್ನು ನನ್ನ ತಂದೆ ಸಹ ಉಪಯೋಗಿಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ತಂದೆ ಭದ್ರಾವತಿಯಿಂದ ಸದರಿ ಜಮೀನುಗಳನ್ನು ಅಭಿವೃದ್ಧಿ ಪಡಿಸಲು ಊರಿಗೆ ಬಂದು  ಹೋಗುತ್ತಿದ್ದರು. ನನ್ನ ತಂದೆ ಕೆಲಸಕ್ಕೆ ಸೇರುವ ಮುನ್ನ ನನ್ನ ತಾತ ಭದ್ರಾವತಿಗೆ ಬಂದು ಹೋಗುತ್ತಿದ್ದರು ಮತ್ತು ನನ್ನ ತಂದೆಯ ಖರ್ಚನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.  1 ನೇ ಪ್ರತಿವಾದಿಗೆ ಒಬ್ಬಳು ಹೆಣ್ಣು ಮಗಳು

ಮತ್ತು 3 ಜನ ಗಂಡು ಮಕ್ಕಳು ಇರುತ್ತಾರೆ. ದಾವಾ ಸ್ವತ್ತುಗಳನ್ನು ನಮ್ಮ ತಾತ, 1 ನೇ ಪ್ರತಿವಾದಿ ಮತ್ತು ಅವರ ಗಂಡು ಮಕ್ಕಳು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ನಮ್ಮ ತಂದೆ ಮತ್ತು ನಮ್ಮ ತಾತ ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ದಾವಾ ಸ್ವತ್ತುಗಳು ಮುಂಚೆ ಖಾಲಿ ಜಮೀನುಗಳಾಗಿದ್ದವು ಎಂದರೆ ಸಾಕ್ಷಿ 1999 ರಿಂದ ಸದರಿ ಜಮೀನುಗಳಲ್ಲಿ ಅಡಿಕೆ, ತೆಂಗು ಬೆಳೆಯುತ್ತಿದ್ದರು, ನಾನು ಆಗ ಚಿಕ್ಕವನಿದ್ದರಿಂದ ನನಗೆ ಸರಿಯಾಗಿ ಗೊತ್ತಿಲ್ಲ. ದಾವಾ ಸ್ವತ್ತು ಐಟಂ ನಂ. 16 ರಲ್ಲಿ ಸರ್ವೆನಂ. 25/3 ರಲ್ಲಿ 1 ಎಕರೆ ಯಲ್ಲಿ 10 ವರ್ಷದ ಅಡಿಕೆ ಇರುತ್ತದೆ. ದಾವಾ ಸ್ವತ್ತು ಐಟಂ ನಂ. 1 ರಲ್ಲಿ ಸರ್ವೆ ನಂ. 21 ರಲ್ಲಿ 20 ವರ್ಷಗಳ 350 ತೆಂಗಿನ ಮರಗಳು ಇರುತ್ತದೆ. ದಾವಾ ಸ್ವತ್ತು ಐಟಂ ನಂ. 11 ರಲ್ಲಿ ಸರ್ವೆ ನಂ. 6/7 ರಲ್ಲಿ 12 ರಿಂದ 13 ವರ್ಷ ವಯಸ್ಸಿನ ಅಡಿಕೆ ಹಾಗೂ ತೆಂಗು ಇರುತ್ತದೆ. ದಾವಾ ಸ್ವತ್ತು ಐಟಂ ನಂ. 10 ರಲ್ಲಿ ಸರ್ವೆ ನಂ. 6/3 ರಲ್ಲಿ ಸುಮಾರು 15 ವರ್ಷಗಳ ತೆಂಗಿನ ಮರಗಳು ಇರುತ್ತವೆ. ದಾವಾ ಸ್ವತ್ತು ಐಟಂ ನಂ.3 ರಲ್ಲಿ ಸರ್ವೆ ನಂ.22 ರಲ್ಲಿ ಸುಮಾರು 15 ವರ್ಷಗಳ ತೆಂಗಿನ ಮರಗಳು ಇರುತ್ತವೆ.

ನನ್ನ ತಂದೆ ಸುಮಾರು 27 ವರ್ಷಗಳಿಂದ ಭದ್ರಾವತಿಯಲ್ಲಿ ವಾಸವಿರುತ್ತಾರೆ. ದಾವಾ ಸ್ವತ್ತುಗಳು 16 ಇರುತ್ತವೆ. ಅದರ ಚಕ್ಕುಬಂದಿ ನನಗೆ ತಿಳಿದಿದೆ. ವಾದ ಪತ್ರದಲ್ಲಿರುವಂತೆ ಸಾಕ್ಷಿ ಎಲ್ಲಾ ದಾವಾ ಸ್ವತ್ತುಗಳ ಸರ್ವೆ ನಂ, ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ನುಡಿದಿರುತ್ತಾರೆ. ಸದರಿ ಚಕ್ಕುಬಂದಿಗಳನ್ನು ನನ್ನ ತಂದೆಯವರು ಹೇಳಿ ವಾದ ಪತ್ರದಲ್ಲಿ ಬರೆಸಿರುತ್ತಾರೆ. ನಾನು ಬಿ.ಎ ಪದವೀದರನಾಗಿರುತ್ತೇನೆ. ನನ್ನ ತಂದೆಗೆ 2001 ರಿಂದ ತಿಂಗಳಿಗೆ ಸುಮಾರು 35 ರಿಂದ 40 ಸಾವಿರ ರೂಪಾಯಿ ಸಂಬಳ ಬರುತ್ತಿತ್ತು. ಸದರಿ ಸಂಬಳ ನಮ್ಮ ಕುಟುಂಬದ ಜೀವನೋಪಾಯಕ್ಕೆ ಸಾಕಾಗುತ್ತಿತ್ತು ಎಂದರೆ ಸರಿ. ಸದರಿ ಸಂಬಳದಲ್ಲಿ ಖರ್ಚು ಗಳನ್ನು ಕಳೆದ ಮೇಲೆ ಉಳಿತಾಯ ಮಾಡುತ್ತಿದ್ದೆವು. ಅದರಂತೆ ತಿಂಗಳಿಗೆ 10 ರಿಂದ 12 ಸಾವಿರ ಉಳಿತಾಯ ಮಾಡುತ್ತಿದ್ದೆವು. ನನ್ನ ತಾತ ಮತ್ತು 1 ನೇ ಪ್ರತಿವಾದಿ ನಮ್ಮ ಜೀವನೋಪಾಯಕ್ಕೆ ದಾವಾ ಸ್ವತ್ತುಗಳಿಂದ ಬಂದ ಆದಾಯವನ್ನೂ ಸಹ ನೀಡುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ತಾತ 1997 ರಲ್ಲಿ ಮರಣ ಹೊಂದಿರುತ್ತಾರೆ. 1 ನೇ ಪ್ರತಿವಾದಿ 2021 ರಲ್ಲಿ ತೀರಿಕೊಂಡಿರುತ್ತಾರೆ. ತರೀಕೆರೆ ತಾಲ್ಲೂಕು ಗೋಪಾಲ ಗ್ರಾಮದಲ್ಲಿ ಸರ್ವೆ ನಂ. 168/3 ರಲ್ಲಿ 23 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ನನ್ನ ತಾತ ತೀರಿಕೊಂಡ ಮೇಲೆ 1 ನೇ ಪ್ರತಿವಾದಿ ನನ್ನ ತಂದೆಗೆ ಕೊಡಿಸಿದರು ಎಂದರೆ ಸರಿಯಲ್ಲ. ಸದರಿ ಜಮೀನು ಸೈಟುಗಳಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಜಮೀನು ಮತ್ತು ಸೈಟುಗಳು ಬಹಳಷ್ಟು ಬೆಲೆ ಉಳ್ಳದ್ದಾಗಿರುತ್ತದೆ ಎಂದರೆ ಸರಿಯಲ್ಲ. ಭದ್ರಾವತಿಯಲ್ಲಿ ನಮಗೆ 2 ಮನೆ ಇದೆ ಎಂದರೆ ಸಾಕ್ಷಿ ಒಂದು ಮನೆ ಸರ್ಕಾರದಿಂದ

ಮಂಜೂರಾಗಿರುತ್ತದೆ ಎನ್ನುತ್ತಾರೆ. ಸದರಿ ಮನೆಯನ್ನು 1 ನೇ ಪ್ರತಿವಾದಿ ಕಟ್ಟಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆ RCC ಮನೆಯಾಗಿದ್ದು ಅದರಲ್ಲಿ 4 ಭಾಗಗಳಿರುತ್ತವೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ಅದು ಶೀಟಿನ ಮನೆ ಎನ್ನುತ್ತಾರೆ. ಬೆಂಗಳೂರಿನಲ್ಲಿ ನನ್ನ ತಂದೆ ಹೆಸರಿಗೆ ವಿಲ್ ಮೂಲಕ ಬಂದಿರುವ ಒಂದು ಮನೆ ಇರುತ್ತದೆ. ಬೆಂಗಳೂರಿನಲ್ಲಿ ನನ್ನ ತಂದೆ ಹೆಸರಿಗೆ 2 ಮನೆಯಿದ್ದು ಅದರ ಸೈಟನ್ನು ಕೊಡಿಸಿದ್ದು ಮತ್ತು ಅದರಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದು 1 ನೇ ಪ್ರತಿವಾದಿ ಎಂದರೆ ಸರಿಯಲ್ಲ. ಬೆಂಗಳೂರಿನ ಮನೆ ಸುಮಾರು 10 ವರ್ಷದ್ದಾಗಿರುತ್ತದೆ. ಭದ್ರಾವತಿಯ ಮನೆಯನ್ನು 2011 ರಲ್ಲಿ ಕಟ್ಟಿಸಲಾಯಿತು. ಸದರಿ ಮನೆಗಳನ್ನು ಕಟ್ಟುವಾಗ ಹಾಗೂ ಜಮೀನುಗಳನ್ನು ಖರೀದಿಸುವಾಗ ನನ್ನ ತಾತ ಬದುಕಿರಲಿಲ್ಲ ಎಂದರೆ ಸರಿ . ಭದ್ರಾವತಿ ಹಾಗೂ ಬೆಂಗಳೂರಿನಲ್ಲಿರುವ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರಿದು ಅದು ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತುಗಳಾಗಿರುವುದರಿಂದ ಸೇರಿಸಿರುವುದಿಲ್ಲ ಎನ್ನುತ್ತಾರೆ.

ಸರ್ವೆ ನಂ.21 ದಾವಾ ಸ್ವತ್ತುಐಟಂ ನಂ.1, 1 ನೇ ಪ್ರತಿವಾದಿಯ ಹೆಸರಿಗೆ ದರಕಾಸ್ತು ಆಗಿರುತ್ತದೆ ಎಂದರೆ ಸರಿಯಲ್ಲ. ಐಟಂ ನಂ1 ನ್ನು ಹೊರತು ಪಡಿಸಿ ಉಳಿದ ದಾವಾ ಸ್ವತ್ತುಗಳ ಖಾತೆ ಮತ್ತು ಪಹಣಿ 2014 ರಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸಾಕ್ಷಿ ಅದನ್ನು forgery ಮಾಡಲಾಗಿದೆ ಎನ್ನುತ್ತಾರೆ. ದಾವಾ ಸ್ವತ್ತುಐಟಂ ನಂ.10 ಮತ್ತು 11, ಸರ್ವೆ ನಂ. 6/3 ರ ಸ್ವತ್ತು ಸಿದ್ದ ಬಿನ್ ಸಿದ್ದಲಿಂಗಯ್ಯ, ಸಿದ್ದಲಿಂಗೇಗೌಡ ಬಿನ್ ಲೇಟ್ ಕರಿಯಣ್ಣ, ಸರ್ವೆ ನಂ. 6/7 ರ ಸ್ವತ್ತು ಸಿದ್ದ ಬಿನ್ ಸಿದ್ದಲಿಂಗಯ್ಯ, ಸಿದ್ದಲಿಂಗೇಗೌಡ ಬಿನ್ ಲೇಟ್ ಕರಿಯಣ್ಣ ಮತ್ತು ಪೂರಪ್ಪ ರವರ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. ಸದರಿಯವರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿ .

ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಅನ್ಯೋನ್ಯವಾಗಿದ್ದರು. ಸಾಕ್ಷಿ ಮುಂದುವರಿದು, 2014-15 ರಲ್ಲಿ 1 ನೇ ಪ್ರತಿವಾದಿ ನನ್ನ ತಂದೆಗೆ ತಿಳಿಸದೇ ದಾವಾ ಸ್ವತ್ತುಗಳ ಖಾತೆ ಪಹಣಿಯನ್ನು ಅವರ ಹೆಸರಿಗೆ ಬದಲಾವಣೆ ಮಾಡಿಕೊಂಡಾಗಿನಿಂದ ನನ್ನ ತಂದೆಗೂ 1 ನೇ ಪ್ರತಿವಾದಿಗೂ ಮನಸ್ಥಾಪ ಶುರುವಾಗಿರುತ್ತದೆ. 2014-15 ರಲ್ಲಿ ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ನಡುವೆ ಮಾತುಕತೆಯಾಗಿ ನನ್ನ ತಂದೆಯ ಭಾಗಕ್ಕೆ ಭದ್ರಾವತಿ ಮತ್ತು ಬೆಂಗಳೂರಿನಲ್ಲಿರುವ ಮನೆ ಮತ್ತು ಜಮೀನುಗಳನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಭದ್ರಾವತಿ ಮತ್ತು ಬೆಂಗಳೂರಿನಲ್ಲಿರುವ ಆಸ್ತಿಗಳ ಖಾತೆ ಮತ್ತು ಪಹಣಿಯನ್ನು ನನ್ನ ತಂದೆ ಹೆಸರಿಗೆ ಅವರು ಬದಲಾಯಿಸಿಕೊಂಡರು ಎಂದರೆ ಸರಿಯಲ್ಲ. ಅದರಂತೆ ದಾವಾ ಸ್ವತ್ತುಗಳ ಖಾತೆ ಮತ್ತು ಪಹಣಿಯನ್ನು 1 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಮಾಡಿಕೊಡಲು ನನ್ನ ತಂದೆ ಒಪ್ಪಿಗೆ

ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು 1 ನೇ ಪ್ರತಿವಾದಿ ಯ ಭಾಗಕ್ಕೆ ಬಿಟ್ಟಿರುತ್ತಾರೆ ಆದ್ದರಿಂದ ಅವರು ಮರಣ ಹೊಂದುವ ವರೆಗೂ ಅದ ರ ಸ್ವಾಧೀನದಲ್ಲಿದ್ದು ಈಗ ಅವರ ಮಕ್ಕಳ ಅದರ ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿ ಸದರಿ ದಾವಾ ಸ್ವತ್ತುಗಳು ನನ್ನ ತಾತನಿಗೆ ಸೇರಿದ್ದು ಅದರಲ್ಲಿ 1 ನೇ ಪ್ರತಿವಾದಿಗೆ ಭಾಗ ಬಿಟ್ಟರುವುದಿಲ್ಲ ಎನ್ನುತ್ತಾರೆ. ದಾವಾ ಸ್ವತ್ತುಗಳಲ್ಲಿ 1 ನೇ ಪ್ರತಿವಾದಿ 4 ಕೊಳವೆ ಬಾವಿಗಳನ್ನು ಕೊರೆಸಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಂದೆ ಮತ್ತು 1 ನೇ ಪ್ರತಿವಾದಿ ಸೇರಿ ಸದರಿ ಕೊಳವೆ ಬಾವಿಗಳನ್ನು ಕೊರೆಸಿರುತ್ತಾರೆ ಎನ್ನುತ್ತಾರೆ. ಸದರಿ ಕೊಳವೆ ಬಾವಿಗಳನ್ನುಕೊರೆಸಲು 1 ನೇ ಪ್ರತಿವಾದಿ ಕೈಸಾಲ ಹಾಗೂ ಬ್ಯಾಂಕ್ ನಿಂದ ಸಾಲ ಪಡೆದಿರುತ್ತಾರೆ ಎಂದರೆ ಸಾಕ್ಷಿ ಸದರಿ ಬೋರ್ ವೆಲ್ ನ್ನು ದಾವಾ ಸ್ವತ್ತುಗಳಿಂದ ಬಂದ ಆದಾಯ ಮತ್ತು ನನ್ನ ತಂದೆಯವರು ನೀಡಿದ ಹಣದಿಂದ ಕೊರೆಸಿರುತ್ತೆರೆ ಎನ್ನುತ್ತಾರೆ. ದಾವಾ ಸ್ವತ್ತುಗಳನ್ನು 1 ನೇ ಪ್ರತಿವಾದಿ ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ಹಾಗೂ 1 ನೇ ಪ್ರತಿವಾದಿ ಸೇರಿ ಅಭಿವೃದ್ಧಿ ಪಡಿಸಿರುತ್ತಾರೆ ಎನ್ನುತ್ತಾರೆ. ಈ ದಿನ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ದಾವಾ ಸ್ವತ್ತುಗಳ ಸ್ವಾಧೀನದಲ್ಲಿದ್ದು ಅದನ್ನು ಅಭಿವೃದ್ಧಿ ಪಡಿಸಿದ್ದು ಅದಕ್ಕೆ ಹಕ್ಕುದಾರರಾಗಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಸುಳ್ಳು ಹೇಳಿ ಸದರಿ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಐಟಂ ನಂ.12, 13 ಮತ್ತು 14, ನಿಪಿ.14 ಮತ್ತು 15 ರಲ್ಲಿರುವ ಆಸ್ತಿ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

sd/-
**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**